**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಸಿಸಿ ನಂಃ 51/2016</u>**

**<u>ಸಿಡಬ್ಲೂಃ14 ಪಿ ಡಬ್ಲ್ಯೂಃ14</u>**

**ಹೆಸರುಃ ಮಂಜುನಾಥಗೌಡ**

**ತಂದೆ ಹೆಸರುಃ ವಿಶ್ವನಾಥಗೌಡ ಪಾಟೀಲ**

**ವಯಸ್ಸುಃ 48 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹೆರೇಬೂದಿಹಾಳ.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 24.01.2025</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾಃ1, 4 ರಿಂದ 7, 9, 10, 13, 15, 17, 19, 21, 22, 23, 24, 25, 26, 27, 29, 30, 33 ರಿಂದ 36 ರವರು ನನಗೆ ಗೊತ್ತಿಲ್ಲ. ಚಾಸಾಃ 2, 3, 8, 11, 12, 16, 18, 20, 28, 31, 32 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 3 ರವರ ಪರಿಚಯ ಇದೆ. ಆರೋಪಿ 2 ರಿಂದ 6, 8 ರಿಂದ 15 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಈ ದಿನ ಆರೋಪಿ 1, 4 ರಿಂದ 6, 8 ರಿಂದ 14 ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿಗಳ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಆರೋಪಿನ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ**

ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ

1. ಇಂಗಳಗಿ ಗ್ರಾಮ ಪಂಚಾಯತಿಗೆ ನಮ್ಮ ಹಿರೇಬೂದಿಹಾಳ ಗ್ರಾಮ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು, ನನ್ನ ಹೆಂಡತಿ ನೀಲವ್ವ ಇರುತ್ತೇವೆ ನನ್ನದು ಇಂಗಳಗಿ ಕೆವಿಜಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇದ್ದು ಅದರ ನಂಃ8484 ಇದ್ದು, ನಮ್ಮ ಘರಾಣಕ್ಕೆ ಒಂದು ಟ್ರ್ಯಾಕ್ಟರ ಇದ್ದು ಅದರ ನಂಃಕೆಎ 25 ಟಿ 6996 ಹಾಗೂ ಟ್ರೇಲರ್ ನಂಃಕೆಎ 25 ಟಿ 6997 ಅದರಲ್ಲಿ ನಮ್ಮ ಹೊಲದ ಕೆಲಸವನ್ನು ಮಾಡುತಿದ್ದೆ ಎಂದರೆ ಸರಿಯಲ್ಲ.

2. ಈ ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯಿತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದ್ದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ನನಗೆ ಗೊತ್ತಿಲ್ಲ.

ಆಡಳಿತಾಧಿಕಾರಿ ಎ ಆರ್ ಕುಲಕರ್ಣಿ ಇವರ ಹೇಳಿಕೆ ಮೇರೆಗೆ ನಮ್ಮ ಟ್ರ್ಯಾಕ್ಟರನಿಂದ ಮೋಹರಂ ಮಣ್ಣನ್ನು ಮೇಲಿನ ರಸ್ತೆಗಳಿಗೆ ತಂದು ಹಾಕಿ ಒಂದು ಟ್ರೇಪಗೆ ರೂ 200/ ಬಾಡಿಗೆಗೆ ಕರಾರು ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ನಂತರ ಕೆಲಸ ಮುಗಿಯುವ ವೇಳೆಗೆ ಬಂದು, ನನ್ನಂತೆ ಚಾಸಾಃ10 ಮತ್ತು 11 ರವರು ತಮ್ಮ ಟ್ರ್ಯಾಕ್ಟರಗಳಿಂದ ಭರಮಗೌಡ ಇವರು ಸಹ ತಮ್ಮ ಟ್ರ್ಯಾಕ್ಟರಗಳಿಂದ ಹಾಗೂ ಗುರುಸಿದ್ದಗೌಡ ಬನ್ನೂರು ಇವರು ತಮ್ಮ ಎರಡು ಟ್ರ್ಯಾಕ್ಟರಗಳಿಂದ ಮೋಹರಂ ಮಣ್ಣನ್ನು ಹೆರಿಸಿ ರಸ್ತೆ ಮಾಡಿಸಿದ್ದು, ನಂತರ ದಿವಸಕ್ಕೆ ಅಜಮಾಸ್ ಐದಾರು ಟ್ರೇಪ ಮೋಹರಂ ಮಣ್ಣನ್ನು ಸುಮಾರು 15 ರಿಂದ 20 ದಿವಸಗಳ ವರೆಗೆ ಹೇರಿದ್ದು, ಅದರ ಬಾಬುತ್ತು

ಅಜಮಾಸ ರೂ 5,100/ ಬಾಡಿಗೆ ಆಗಿದ್ದು, ಅದರ ಹಣವನ್ನು ಪಂಚಾಯತಿ ಕಾರ್ಯದರ್ಶಿಗೆ ಹಾಗೂ ಪಿಡಿಓ ಕೇಳಿದ್ದು, ಅದರ ಬಿಲ್ ಮಾಡಿ ಕಳುಹಿಸಿದ್ದು ಇರುತ್ತದೆ ಅಂತ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮಂತೆ ಅಶೋಕ ವಿ ಶಿರೂರು ಇವರು ವಿ ಎಮ್ ತೀರಕನಗೌಡ್ರ ಇವರ ಸಂಬಂದಿಕರು ಇದ್ದು, ಉದ್ಯೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ನಮ್ಮಂತೆ ಟ್ರ್ಯಾಕ್ಟರಗಳಿಂದ ಮೋರಂ ಮಣ್ಣನ್ನು ಎರಿಸಿರುವುದಿಲ್ಲ ಹಾಗೂ ರಸ್ತೆ ಮಾಡಲು ಜೆಸಿಬಿ ಹಾಗೂ ರೂಲರ್ ತಂದು ಕೆಲಸ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಹೆಸರಿಗೆ ತಾವು ತೋರಿಸಿದ ಕೂಲಿಕಾರರ ಕೂಲಿ ಲಿಸ್ಟ ನಂಃ700 ನೋಡಲಾಗಿ ಅದರಲ್ಲಿ ಅ.ನಂಃ55 ಕ್ಕೆ ನನ್ನ ಹೆಸರನ್ನು ಹಾಗೂ ಅ.ನಂಃ56 ಕ್ಕೆ ನನ್ನ ಹೆಂಡತಿಯ ಹೆಸರನ್ನು ಬರೆಯಲಾಗಿದ್ದು, ನನ್ನ ಹೆಸರಿನ ಜಾಬ್ ಕಾರ್ಡ ನಂಃ113 ಅಂತ ನಮೂದಿಸಲಾಗಿ ನಾನು ಪಂಚಾಯತಿ ವತಿಯಿಂದ ಕೂಲಿ ಕೆಲಸ ಮಾಡುವ ಬಗ್ಗೆ ಅರ್ಜಿ ಕೊಟ್ಟು ಜಾಬ್ ಕಾರ್ಡ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಟ್ರ್ಯಾಕ್ಟರ ಮಣ್ಣು ಎರಿದ್ದರಿಂದ ನನ್ನ ಉಳಿತಾಯ ಖಾತ ನಂಬರನ್ನು ಕಾರ್ಯದರ್ಶಿ ನದಾಫ ಇವರು ಪಡೆದಿದ್ದರು ಎಂದರೆ ಸರಿಯಲ್ಲ. ನಾನು ಆಗಲೀ ನನ್ನ ಹೆಂಡತಿ ಆಗಲೀ ಉದ್ಯೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ರಸ್ತೆ ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಕೂಲಿಕಾರರ ಪಟ್ಟಿಯಲ್ಲಿ ನನ್ನ, ನನ್ನ ಹೆಂಡತಿಯ ಹೆಸರನ್ನು ಖೊಟ್ಟಿ ಬರೆಯಲಾಗಿದೆ ಹಾಗೂ ನನ್ನ ಮತ್ತು ನನ್ನ ಹೆಂಡತಿ ಹೆಸರಿನ ಮುಂದೆ ರೂ 700/ ಕೂಲಿ ಹಣ ಬರೆದು ಹಣ ಮುಟ್ಟಿದಂತೆ ಎರಡು ನನ್ನ ಸಹಿ ಹೂಲುವಂತೆ ನಕಲಿ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಮ್ ಎನ್ ಆರ್ ತಯಾರಿಸಿದ ಶಂಕ್ರಪ್ಪ ಸಂಗಣ್ಣನವರ ಹಾಗೂ ಪಿಡಿಓ ಶೆಟ್ಟಿನವರ ಇವರೇ ಜವಾಬ್ದಾರರು ಎಂದರೆ ಸರಿಯಲ್ಲ. ನನ್ನ ಬಾಜ್ ಕಾರ್ಡ ಮೇಲೆ ಒಟ್ಟು ಇಬ್ಬರು ಜನ ಕುಟುಂಬ ಸದಸ್ಯರು ರೂ 700/ ರಂತೆ ಖರ್ಚು ಹಾಕಿ ರೂ 1400/ ಸರಕಾರಕ್ಕೆ ಅನುದಾನ ಹಣವನ್ನು ಖೊಟ್ಟಿಯಾಗಿ ಖರ್ಚು ಹಾಕಿ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಖೊಟ್ಟಿ ಸಹಿ ಮಾಡಿ ಈ ಹಣವನ್ನು ಪಡೆದಂತೆ ಖೊಟ್ಟಿ ಸಹಿಗಳನ್ನು ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ಈಗ ತಾವು ತೋರಿಸಿದ ನನ್ನ ಹೆಸರಿನ ಮೇಲೆ ಇದ್ದ ಕೆವಿಜಿ ಬ್ಯಾಂಕ ಇಂಗಳಗಿಯಿಂದ ಪಡೆದ ಅಕೌಂಟ ಸ್ಟೆಟಮೆಂಟ ನೋಡಿದ ಅದರ ಪೇಯಜ್ ಲಿಸ್ಟನಲ್ಲಿ

ಅ.ನಂಃ3 ಕ್ಕೆ ನನ್ನ ಹೆಸರು ನಮೂದಿಸಿ ಉಳಿತಾಯ ಖಾತೆ ನಂಬರ ಬರೆದು ರೂ 5100/ ಜಮಾ ಮಾಡಿದ್ದು, ಅದಕ್ಕೆ ಪಿಡಿಓ ಹಾಗೂ ಅಧ್ಯಕ್ಷರ ಸಹಿ ಇರುವುದಿಲ್ಲ, ಚೆಕ್ಕ ನಂಃ943503 ದಿಃ07.09.2010 ಮೊತ್ತ 55,900/ ಇದಕ್ಕೆ ಅಧ್ಯಕ್ಷರಾದ ಮಮತ್ತಾಜ ಬೇಗಂ ಹಾಗೂ ಪಿಡಿಓ ಶೆಟ್ಟನವರ ಇವರ ಸಹಿಗಳು ಇರುತ್ತವೆ ಎಂದರೆ ಸರಿಯಲ್ಲ. ನನ್ನದು ಅಂತ ಹೇಳಿದ ಸಹಿಗಳನ್ನು ಅವು ಸಹಿಗಳು ನಮ್ಮದು ಇರುವುದಿಲ್ಲ ಎಂದರೆ ಸರಿಯಲ್ಲ. ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಹಾಗೂ ಮಮ್ತಾಜ ಬೇಗಂ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ21 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬೂಃ16 ಪಿ ಡಬ್ಲ್ಯೂಃ15**

**ಹೆಸರುಃ ಬಾಬಾಜಾನ**

**ತಂದೆ ಹೆಸರುಃ ಚಾಂದುಸಾಬ ಸೇತಸನದಿ**

**ವಯಸ್ಸುಃ 60 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 24.01.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ1 ರಿಂದ 9 , 10 ರಿಂದ 15, 18, 19, 23, 24, 25, 26, 27, 28, 35 ಹಾಗೂ 36 ರವರು ನನಗೆ ಗೊತ್ತಿಲ್ಲ. ಚಾಸಾಃ17, 20 ರಿಂದ 22, 29, 30, 31, 32, 33, 34 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 2, 3 ಮತ್ತು 15 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಈ ದಿನ ಆರೋಪಿ 1, 4 ರಿಂದ 6, 8 ರಿಂದ 14 ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿಗಳ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಆರೋಪಿನ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮನರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮನರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಇಂಗಳಗಿ ಗ್ರಾಮ ಪಂಚಾಯತ ನಮ್ಮ ಹಿರೇಬೂದಿಹಾಳ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು ಮತ್ತು ನನ್ನ ಹೆಂಡತಿ ರಜಿಯಾಬೇಗಂ ಹಾಗೂ ನನ್ನ ಮಗ ದಾದಾಫೀರ ನನ್ನದು ಇಂಗಳಗಿ ಕೆವಿಜಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇದ್ದು ಅದರ ನಂಃ4191 ಇರುತ್ತದೆ. ಇನ್ನುಳಿದ ಕೂಲಿಕಾರ್ಮಿಕರೊಂದಿಗೆ ಕೂಲಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, 2010 ನೇ ಇಸ್ವಿಯಲ್ಲಿ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ 2009-2010 ನೇ ಸಾಲಿನಲ್ಲಿ ಎಮ್ ಎ ನದಾಫ ಎಂಬುವವರು ಕಾರ್ಯದರ್ಶಿ ಅಂತ ಕ್ಲರ್ಕ ಎಂದು ಶಂಕರಪ್ಪ ಸಂಗಣ್ಣನವರ, ನೀಲವ್ವ ಭದ್ರಾಪುರ ಎಂಬ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ 2010-2011 ನೇ ಸಾಲಿನಲ್ಲಿ ಪಂಚಾಯತ ಚುನಾವಣೆ ಆದಾಗ 2 ನೇ ಆರೋಪಿ ಮಮ್ತಾಜ ಬೇಗಂ ಸದಸ್ಯರು ಅಧ್ಯಕ್ಷರು ಅಂತ ಆಯ್ಕೆ ಮಾಡಿದ್ದು ಇರುತ್ತದೆ ಮತ್ತು ಪಿಡಿಓ ಅಂತ ನಾಗೇಶ ಶೆಟ್ಟೆನ್ನವರ ಕಾರ್ಯದರ್ಶಿ ಅಂತ ಎ ಎಮ್ ನದಾಫ, ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇದ್ದು ಇವರು ಕೂಲಿ ಕೆಲಸ ಮಾಡಿದ ಕೇಲವು ಕೂಲಿಕಾರರ ಖಾತೆಗಳು ಬ್ಯಾಂಕಿನಲ್ಲಿ ಇರುವುದಿಲ್ಲ, ಅವರಿಗೆ ಕೂಲಿ ಹಣ ಕೊಡಬೇಕಾಗುತ್ತದೆ, ಆದ್ದರಿಂದ ನಿಮ್ಮ ಉಳಿತಾಯ ಖಾತೆಯ ಪಾಸ್ ಪುಸ್ತಕ ನಂಬರ ಕೊಡಿ ಅಂತ ಕೇಳಿ ನನ್ನ ಬ್ಯಾಂಕಿನ ಖಾತೆಯ ಉಳಿತಾಯ ಖಾತೆಯ ನಂಬರ 4191 ಮತ್ತು ಪಾಸ್ ಬುಕ್ಕನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಉದೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಶಂಕ್ರಪ್ಪ ಸಂಗಣ್ಣನವರ ಇವರು ತಯಾರಿಸಿದ್ದು ಅದರ ನಂಃ700 ಇದ್ದು ಇದರಲ್ಲಿ ನನ್ನ ಹೆಸರು ಅ.ನಂಃ69 ಕ್ಕೆ ನನ್ನ ಹೆಸರು ಬರೆದು ಜಾಬ್ ಕಾರ್ಡನ ನಂಃ129 ಮುಂದೆ ನನ್ನ ಹೆಸರಿನ ಮುಂದೆ ರೂ 700/ ಕೊಟ್ಟಂತೆ ನಮೂದು ಇದ್ದು ಪಟ್ಟಿಯಲ್ಲಿ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದರಂತೆ ಅಂಃ70 ಕ್ಕೆ ನನ್ನ ಹೆಂಡತಿಯ ಹೆಸರು ಬರೆದು ಹೆಸರಿನ ಮುಂದೆ ಜಾಬ್ ಕಾರ್ಡ ನಂಃ129 ಅದರ ಮುಂದೆ ಕೂಲಿ ಹಣ ರೂ 700/- ಕೊಟ್ಟಂತೆ ನಮೂದಿಸಿದ್ದು ಮತ್ತು ಹಣ ಮುಟ್ಟಿದೆ ಅಂತ ಕೂಲಿ ಪಟ್ಟಿಯಲ್ಲಿ ಸಹಿ ಮಾಡಿರುವುದು

ಖೊಟ್ಟಿಯಾಗಿರುತ್ತದೆ, ಅ ನಂ:71 ಕ್ಕೆ ನನ್ನ ಮಗನ ಹೆಸರು ಬರೆದು ನನ್ನ ಜಾಬ್ ಕಾರ್ಡನ ನಂಬರಿಗೆ ಅವನ ಹೆಸರಿನ ಮುಂದೆ ದಾದಾಪೀರ ಅಂತ ಕನ್ನಡದಿಂದ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ನಂ:943503 ದಿ:07.09.2010 ರಂದು ಮೊತ್ತ ರೂ 55,900/- ಇದ್ದು, ಈ ಹಣವನ್ನು ಜಮಾ ಮಾಡಬೇಕು ಅಂತ ಈ ಚೆಕ್ಕಿನ ಸಂಗಡ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ಅ.ನಂ:7 ಕ್ಕೆ ನನ್ನ ಹೆಸರು ನಮೂದಿಸಿ, ನನ್ನ ಅಕೌಂಟ ನಂ:4191 ಅಂತ ಬರೆಯಲಾಗಿ ಈ ಲಿಸ್ಟ ಪ್ರಕಾರ ರೂ 12650/- ಜಮಾ ಮಾಡಲು ಪಂಚಾಯತ ಇವರು ಬರೆಯಲಾಗಿ ಈ ಹಣ ನನ್ನ ಅಕೌಂಟ ಸ್ಟೇಟಮೆಂಟನಲ್ಲಿ ನೋಡಿದಾಗ ದಿ:13.10.2010 ರಂದು ಜಮೆಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟೆನ್ನವರ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಅದೇ ದಿನ ಗ್ರಾಮ ಪಂಚಾಯತಿ ಕ್ಲರ್ಕ ಶಂಕ್ರಪ್ಪ ಇವರು ಊರಿಗೆ ಬಂದು ನನಗೆ ಮತ್ತು ಇನ್ನುಳಿದ ಕೂಲಿಕಾರರ ಜನರಿಗೆ ದುಡಿದ ಕೂಲಿ ಹಣವನ್ನು ನಿಮ್ಮ ಖಾತೆಗೆ ಜಮಾ ಆಗಿದ್ದು ಇರುತ್ತದೆ, ಅಂತ ಹೇಳಿ ಶಂಕ್ರಪ್ಪ ಸಂಗಣ್ಣನವರ ಇವರು ಬ್ಯಾಂಕಿಗೆ ಬಂದು ಹಣ ತೆಗೆಸಿ ನನ್ನ ಕೂಲಿ ಹಣವಾದ ರೂ 2100/-ವನ್ನು ಮುರಿದುಕೊಂಡು ರೂ 10550/- ಹಣವನ್ನು ಶಂಕ್ರಪ್ಪ ಸಂಗಣ್ಣನವರ ಇವರ ಕೈಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟೆಣ್ಣವರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 10550/- ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿ:22 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು

ಕುಂದಗೋಳ.

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ17 ಪಿ ಡಬ್ಲ್ಯೂಃ16**

**ಹೆಸರುಃ ವೀರಣ್ಣ @ ಈರಣ್ಣ**

**ತಂದೆ ಹೆಸರುಃ ಚೆನ್ನವೀರಪ್ಪ ವಿಠಲಾಪುರ**

**ವಯಸ್ಸುಃ 54 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 24.01.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ1 ರಿಂದ 5, 7, 9, 10, 13, 15, 18, 20, 23, 26, 27, 29, 35 ಹಾಗೂ 36 ರವರು ನನಗೆ ಗೊತ್ತಿಲ್ಲ. ಚಾಸಾಃ 6, 8, 11, 12, 14, 16, 19, 21, 22, 24, 25, 28, 30, 31, 32, 33, 34 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 2, 3 ಮತ್ತು 15 ರವರ ಪರಿಚಯ ಇರುವುದಿಲ್ಲ. ಆರೋಪಿ 9, 10 ಹಾಗೂ 13 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಈ ದಿನ ಆರೋಪಿ 1, 4 ರಿಂದ 6, 8, 11 ರಿಂದ 14 ರವರು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿಗಳ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಆರೋಪಿನ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮನರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮನರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಇಂಗಳಗಿ ಗ್ರಾಮ ಪಂಚಾಯತ ನಮ್ಮ ಹಿರೇಬೂದಿಹಾಳ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು ಮತ್ತು ನನ್ನ ಹೆಂಡತಿ ನೀಲವ್ವ ನನ್ನದು ಇಂಗಳಗಿ ಕೆವಿಜಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇದ್ದು ಅದರ ನಂಃ6851 ಇರುತ್ತದೆ. ಇನ್ನುಳಿದ ಕೂಲಿಕಾರ್ಮಿಕರೊಂದಿಗೆ ಕೂಲಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, 2010ನೇ ಇಸ್ವಿಯಲ್ಲಿ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ 2009-2010 ನೇ ಸಾಲಿನಲ್ಲಿ ಎಮ್ ಎ ನದಾಫ ಎಂಬುವವರು ಕಾರ್ಯದರ್ಶಿ ಅಂತ ಕ್ಲರ್ಕ ಎಂದು ಶಂಕರಪ್ಪ ಸಂಗಣ್ಣನವರ, ನೀಲವ್ವ ಭದ್ರಾಪುರ ಎಂಬ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ 2010-2011 ನೇ ಸಾಲಿನಲ್ಲಿ ಪಂಚಾಯತ ಚುನಾವಣೆ ಆದಾಗ 2ನೇ ಆರೋಪಿ ಮಮ್ತಾಜ ಬೇಗಂ ಸದಸ್ಯರು ಅಧ್ಯಕ್ಷರು ಅಂತ ಆಯ್ಕೆ ಮಾಡಿದ್ದು ಇರುತ್ತದೆ ಮತ್ತು ಪಿಡಿಓ ಅಂತ ನಾಗೇಶ ಶೆಟ್ಟನ್ನವರ ಕಾರ್ಯದರ್ಶಿ ಅಂತ ಎ ಎಮ್ ನದಾಫ, ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇದ್ದು ಇವರು ಕೂಲಿ ಕೆಲಸ ಮಾಡಿದ ಕೇಲವು ಕೂಲಿಕಾರರ ಖಾತೆಗಳು ಬ್ಯಾಂಕಿನಲ್ಲಿ ಇರುವುದಿಲ್ಲ, ಅವರಿಗೆ ಕೂಲಿ ಹಣ ಕೊಡಬೇಕಾಗುತ್ತದೆ, ಆದ್ದರಿಂದ ನಿಮ್ಮ ಉಳಿತಾಯ ಖಾತೆಯ ಪಾಸ್ ಪುಸ್ತಕ ನಂಬರ ಕೊಡಿ ಅಂತ ಕೇಳಿ ನನ್ನ ಬ್ಯಾಂಕಿನ ಖಾತೆಯ ಉಳಿತಾಯ ಖಾತೆಯ ನಂಬರ 6851 ಮತ್ತು ಪಾಸ್ ಬುಕ್ಕನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಉದೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಶಂಕ್ರಪ್ಪ ಸಂಗಣ್ಣನವರ ಇವರು ತಯಾರಿಸಿದ್ದು ಅದರ ನಂಃ700 ಇದ್ದು ಇದರಲ್ಲಿ ನನ್ನ ಹೆಸರು ಅ.ನಂಃ53ಕ್ಕೆ ನನ್ನ ಹೆಸರು ಬರೆದು ಜಾಬ್ ಕಾರ್ಡನ ನಂಃ110ಮುಂದೆ ನನ್ನ ಹೆಸರಿನ ಮುಂದೆ ರೂ 700/ ಕೊಟ್ಟಂತೆ ನಮೂದು ಇದ್ದು ಪಟ್ಟಿಯಲ್ಲಿ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದರಂತೆ ಅಂಃ54ಕ್ಕೆ ನನ್ನ ಹೆಂಡತಿಯ ಹೆಸರು ಬರೆದು ಹೆಸರಿನ ಮುಂದೆ ಜಾಬ್ ಕಾರ್ಡ ನಂಃ110 ಅದರ ಮುಂದೆ ಕೂಲಿ ಹಣ ರೂ 700/- ಕೊಟ್ಟಂತೆ ನಮೂದಿಸಿದ್ದು ಮತ್ತು ಹಣ ಮುಟ್ಟಿದೆ ಅಂತ ಕೂಲಿ ಪಟ್ಟಿಯಲ್ಲಿ ಸಹಿ ಮಾಡಿರುವುದು

ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ನಂ:943503 ದಿ:07.09.2010 ರಂದು ಮೊತ್ತ ರೂ 55,900/- ಇದ್ದು, ಈ ಹಣವನ್ನು ಜಮಾ ಮಾಡಬೇಕು ಅಂತ ಈ ಚೆಕ್ಕಿನ ಸಂಗಡ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ಅ.ನಂ:8 ಕ್ಕೆ ನನ್ನ ಹೆಸರು ನಮೂದಿಸಿ, ನನ್ನ ಅಕೌಂಟ ನಂ:5861 ಅಂತ ಬರೆಯಲಾಗಿ ಈ ಲಿಸ್ಟ ಪ್ರಕಾರ ರೂ 12650/- ಜಮಾ ಮಾಡಲು ಪಂಚಾಯತ ಇವರು ಬರೆಯಲಾಗಿ ಈ ಹಣ ನನ್ನ ಅಕೌಂಟ ಸ್ಟೇಟಮೆಂಟನಲ್ಲಿ ನೋಡಿದಾಗ ದಿ:13.10.2010 ರಂದು ಜಮೆಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟನ್ನವರ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಅದೇ ದಿನ ಗ್ರಾಮ ಪಂಚಾಯತಿ ಕ್ಲರ್ಕ ಶಂಕ್ರಪ್ಪ ಇವರು ಊರಿಗೆ ಬಂದು ನನಗೆ ಮತ್ತು ಇನ್ನುಳಿದ ಕೂಲಿಕಾರರ ಜನರಿಗೆ ದುಡಿದ ಕೂಲಿ ಹಣವನ್ನು ನಿಮ್ಮ ಖಾತೆಗೆ ಜಮಾ ಆಗಿದ್ದು ಇರುತ್ತದೆ, ಅಂತ ಹೇಳಿ ಶಂಕ್ರಪ್ಪ ಸಂಗಣ್ಣನವರ ಇವರು ಬ್ಯಾಂಕಿಗೆ ಬಂದು ಹಣ ತೆಗೆಸಿ ನನ್ನ ಕೂಲಿ ಹಣವಾದ ರೂ 1400/-ವನ್ನು ಮುರಿದುಕೊಂಡು ರೂ 11250/- ಹಣವನ್ನು ಪಿಡಿಓ ಇವರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟೆಣ್ಣವರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 11250/- ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿ:23 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**